ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**Sunday 26th August 2018**

## 3rd international Vedic Mathematics seminar was organized by RVCE and Institute for the advancement of Vedic Mathematics

# 'ನಿತ್ಯ ವ್ಯವಹಾರದಲ್ಲಿ ಗಣಿತ ಬಳಕೆ'

ಪ್ರಜಾವಾಣಿ ವಾರ್ತೆ

ಯಶವಂತಪುರ: ಲಾಭದ ಉದ್ದೇಶದೊಂದಿಗೆ ಇಂಗ್ಲಿಷ್ ಭಾಷೆಯನ್ನು ಶೇ 60ರಷ್ಟು ಜನ ಬಳಸುತ್ತಾರೆ. ಆದರೆ ಶೇ 100ರಷ್ಟು ಮಂದಿ ಭಾರತದ ಕೊಡುಗೆಯಾದ ಗಣಿತವನ್ನು ದಿನನಿತ್ಯದ ವ್ಯವಹಾರದಲ್ಲಿ ಸ್ವಾಭಾವಿಕವಾಗಿ ಬಳಕೆ ಮಾಡುತ್ತಿದ್ದಾರೆ ಎಂದು ಐ.ಎ.ವಿ.ಎಂ ಸಂಸ್ಥೆಯ ನಿರ್ದೇಶಕ ಜೇಮ್ಸ್ ಗ್ಲೋವರ್ ಹೇಳಿದರು.

ಆರ್.ವಿ.ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇನ್‌ಸ್ಟಿಟ್ಯೂಟ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ವೇದಿಕ್ ಮ್ಯಾಥಮೆಟಿಕ್ಸ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ 3ನೇ ಅಂತರರಾಷ್ಟ್ರೀಯ ವೇದಗಣಿತ ವಿಚಾರ ಸಂಕಿರಣ ಉದ್ಘಾಟಿಸಿ ಶುಕ್ರವಾರ ಅವರು ಮಾತನಾಡಿದರು.

ವಿಶ್ವದ ವಿವಿಧ ಶೈಕ್ಷಣಿಕ ವಿದ್ಯಾಲಯಗಳು ವೇದಗಣಿತವನ್ನು ಇಂದು ಆದ್ಯತೆಯ ವಿಷಯವನ್ನಾಗಿ ಪರಿಗಣಿಸಿವೆ. ಇದು ವೇದಗಣಿತದ ಮಹತ್ವವನ್ನು ಸಾರುತ್ತದೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ವೇದಗಣಿತ ಅಭ್ಯಾಸವನ್ನು ಕಡ್ಡಾಯಗೊಳಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.



ಕೋಲ್ಕತ್ತಾದಲ್ಲಿ ಆಯೋಜಿಸಿದ್ದ ಹ್ಯಾಕಥಾನ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ವೇದಗಣಿತ ವಿಚಾರ ಸಂಕಿರಣದಲ್ಲಿ ಬಹುಮಾನ ನೀಡಲಾಯಿತು

ಆರ್.ವಿ.ಶಿಕ್ಷಣ ಸಂಸ್ಥೆಯ ರಿಜಿಸ್ಟ್ರಾರ್ ಸೈಯದ್ ಶಹಮೀರ್ ಮಾತನಾಡಿ, 'ಸರಳ, ಸುಲಲಿತ, ಗಣಿತ ಸಮಸ್ಯೆಗಳ ಪರಿಹಾರಕ್ಕೆ ವೇದಗಣಿತದ ಅಭ್ಯಾಸವು ಸಹಕಾರಿ. ನಮ್ಮ ಹಿರಿಯರು ಯಾವುದೇ ತಂತ್ರಜ್ಞಾನವಿಲ್ಲದಿದ್ದರೂ ವೇದಗಣಿತದ ಸಹಾಯದಿಂದ ಕರಾರುವಕ್ಕಾಗಿ ಹವಾಮಾನ, ಮಳೆ, ಪ್ರಕೃತಿ ವಿಕೋಪ ಮುನ್ಸೂಚನೆಗಳನ್ನು ಹೇಳುವಷ್ಟು ತಿಳಿವಳಿಕೆ ಹೊಂದಿದ್ದರು. ವಿಜ್ಞಾನದ ವಿವಿಧ ವಿಷಯಗಳಿಗೆ ಪ್ರಯೋಗಾಲಯವಿದೆ. ಆದರೆ ಗಣಿತಕ್ಕೆ ಯಾವುದೇ ಪ್ರತ್ಯೇಕ ಪ್ರಯೋಗಾಲಯಗಳು ಇಲ್ಲದಿರುವುದು ಆಶ್ಚರ್ಯ ಮೂಡಿಸಿದೆ' ಎಂದರು.